ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು
ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029
ಕಛೇರಿ:080-29753350
karbuildworkerswelfare@gmail.com

ಪತ್ರಸಂಖ್ಯೆ: ಸಿಡಬ್ಲ್ಯೂಡಬ್ಲ್ಯೂಬಿ/ಎಫ್‌ಡಿ/ಸಿಆರ್-04/2021-22

ದಿನಾಂಕ: 28/10/2021

## ಅಲ್ಪಾವಧಿ ದರ ಪಟ್ಟಿಗಳ ಆಹ್ವಾನ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು, ಇಲ್ಲಿ ಲಭ್ಯವಿರುವ ಅಂದಾಜು ಸುಂಕ ಮೊತ್ತ ರೂ. **350 ಕೋಟಿ** (ರೂ. **ಮೂನ್ನೂರ ಐವತ್ತು ಕೋಟಿ ಮಾತ್ರ**) ಗಳನ್ನು ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ (Fixed Deposit / Non-Callable) ಹೂಡಲು ನಿರ್ಧರಿಸಲಾಗಿದೆ. ಇಚ್ಛೆಯುಳ್ಳ ಬೆಂಗಳೂರಿನಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳು ಅಗತ್ಯ ಸಿಂಧುತ್ವ ದಿನಾಂಕಗಳೊಂದಿಗೆ (Validity period) ತಪ್ಪದೇ ನಮೂದಿಸಿ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ಕೋರಲಾಗಿದೆ.

**ಷರತ್ತು ಹಾಗೂ ನಿಬಂಧನೆಗಳು:**

1. ಮುಚ್ಚಿದ ಲಕೋಟೆಯನ್ನು ತೆರೆದ ದಿನದಿಂದ ಸಿಂಧುತ್ವದ ಅವಧಿಯನ್ನು ಕನಿಷ್ಠ 3 ದಿನಗಳವರೆಗೆ ನೀಡಲು ಕೋರಲಾಗಿದೆ.
2. ಸರ್ಕಾರಿ ಆದೇಶ ಸಂಖ್ಯೆ : FD 08 TAR 2020 (Addendum to Circular) ದಿನಾಂಕ: 02.01.2021 ರನ್ವಯ ಯಾವುದೇ ವಿಲೀನಗೊಂಡ ರಾಷ್ಟ್ರೀಕೃತ ಬ್ಯಾಂಕುಗಳು ಪ್ರಸ್ತುತ ಹಣಕಾಸು ವರ್ಷ 2021-22ರ ಅವಧಿಯಲ್ಲಿ ಮಂಡಳಿಯಿಂದ ರೂ. 2000 ಕೋಟಿಯವರೆಗೆ ನಿಶ್ಚಿತ ಠೇವಣಿಯನ್ನು ಪಡೆದಿದ್ದಲ್ಲಿ ಮತ್ತೊಮ್ಮೆ ಅವಕಾಶವಿರುವುದಿಲ್ಲ.
3. ದರ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 08.11.2021 ರಂದು ಸಂಜೆ 5.00 ಗಂಟೆಯೊಳಗೆ **ಕಾರ್ಯದರ್ಶಿಗಳ ಕಛೇರಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**, 1ನೇ ಮಹಡಿ, ಕಲ್ಯಾಣ ಸುರಕ್ಷಾ ಭವನ, ಐ.ಟಿ.ಐ ಆವರಣ, ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029 ಇಲ್ಲಿ ಇಟ್ಟಿರುವ ಕೊಟೇಶನ್ ಪೆಟ್ಟಿಗೆಯಲ್ಲಿ ಹಾಕುವುದು.
4. ಮುಚ್ಚಿದ ಲಕೋಟೆ ದರ ಪಟ್ಟಿಯನ್ನು ದಿನಾಂಕ: 09.11.2021 ರಂದು ಬೆಳಗ್ಗೆ 11.30 ಗಂಟೆಗೆ ಸರಿಯಾಗಿ ಮೇಲೆ ತಿಳಿಸಿದ ಕಛೇರಿಯಲ್ಲಿ ಭಾಗವಹಿಸುವ ಬ್ಯಾಂಕುಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಮುಚ್ಚಿದ ಲಕೋಟೆಯಲ್ಲಿನ ದರ ಪಟ್ಟಿಯನ್ನು ತೆರೆಯುವುದಕ್ಕಾಗಿ ಪ್ರತ್ಯೇಕವಾಗಿ ಸೂಚನಾ ಪತ್ರವನ್ನು ಹೊರಡಿಸಲಾಗುವುದಿಲ್ಲ.

ಜಂಟಿ ಕಾರ್ಯದರ್ಶಿ